**ದಿನಾಂಕ: 03.08.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ.ಎಸ್ ಕೆ ಕೆ ವಕೀಲರಿಂದ

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಪಿ 1 | ಪೋಲಿಸ್ ದೂರು |
| ನಿ ಪಿ 2 | ಪ್ರ.ವ.ವರದಿ |
| ನಿ ಪಿ 3 | ಸ್ಥಳ ಪಂಚನಾಮೆ |
| ನಿ ಪಿ 4 | ಕಚ್ಚಾನಕ್ಷೆ |
| ನಿ ಪಿ 5 | ಗಾಯದ ಪ್ರಮಾಣಪತ್ರ |
| ನಿ ಪಿ 6 | ಎಂ ವಿ ಐ ವರದಿ |
| ನಿ ಪಿ 7 | ಅಂತಿಮ ವರದಿ |
| ನಿ ಪಿ 8 | ಡಿಸ್ಚಾರ್ಜ ಸಮರಿ |
| ನಿ ಪಿ 9 | ಒಂದು ಸಲಹಾ ಚೀಟಿ, 11 ಮೆಡಿಕಲ್ಲು ಬಿಲ್ಲುಗಳನ್ನು ಒಟ್ಟಾರೆಯಾಗಿ |

ನನ್ನ ಅರ್ಜಿಯಲ್ಲಿ ಕೋರಿದಂತೆ ಅರ್ಜಿಯನ್ನು ಪುರಸ್ಕರಿಸಲು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಎದುರುದಾರ ಪರ ಶ್ರೀ ವಿ ಎಸ್ ಎ ವಕೀಲರಿಂದಃ

ಅಪಘಾತದ ದಿನ ಸದರಿ ಬೈಕನ್ನು ನಾನೇ ಚಲಾಯಿಸುತ್ತಿದ್ದೆ. ನನ್ನ ಬಳಿ ಮೋಟಾರ ಬೈಕ ಚಾಲನಾ ಪತ್ರ ಇರುವುದಿಲ್ಲ. ವಾಹನವನ್ನು ಚಲಾಯಿಸಲು ಬರುವವರಿಗೆ ಮಾತ್ರ ವಾಹನ ಚಲಾವಣೆಗೆ ಮತ್ತು ರಸ್ತೆನಿಯಮಗಳ ಬಗ್ಗೆ ಪರಿಶೀಲನೆಗೆ ಒಳಪಟ್ಟು ಚಾಲನಾ ಪತ್ರವನ್ನು ಮಂಜೂರ ಮಾಡುತ್ತಾರೆ ಎಂದರೆ ನಿಜ. ನನಗೆ ಚಾಲನಾ ಪತ್ರ ಇಲ್ಲದ್ದರಿಂದ ಮೋಟಾರ ಬೈಕ ಚಲಾಯಿಸಲು ಬರುವುದಿಲ್ಲ ಮತ್ತು ರಸ್ತೆ ನಿಯಮಗಳ ಬಗ್ಗೆ ಯಾವುದೇ ಜ್ಞಾನ ಇರುವುದಿಲ್ಲ

ಎಂದರೆ ಸರಿಯಲ್ಲ. ಸಾಕ್ಷಿ ನಿಪಿ-4 ರ ಕಚ್ಚಾ ನಕ್ಷೆ ತೋರಿಸಿದ್ದು ಅದನ್ನು ನೋಡಿ ಪರಿಶೀಲಿಸಿ ಅಪಘಾತದ ರಸ್ತೆ ತಡಸ ಹಾನಗಲ್ ನ ರಾಜ್ಯ ಹೆದ್ದಾರಿ ಎಂದರೆ ನಿಜ. ಆಪಾದಿತ ಕಾರ್ ತಡಸ ಕಡೆಯಿಂದ ಬಂತು. ನಿಪಿ-4 ರ ಪ್ರಕಾರ ಆಪಾದಿತ ಕಾರ್ ರಸ್ತೆಯ ಎಡಬದಿಯಲ್ಲಿದೆ ಎಂದರೆ ನಿಜ. ಆಗ ನಾನು ಬದಿಗೆ ರಸ್ತೆಯಿಂದ ಮುಖ್ಯ ರಸ್ತೆಗೆ ಹೋಗುವಾಗ ರಸ್ತೆಯ ಎಡಬದಿ ನೋಡದೇ ಮುಖ್ಯ ರಸ್ತೆಗೆ ನುಗ್ಗಿದ್ದು ಆಗ ಅಪಘಾತ ಆಗಿದ್ದು ಸದರಿ ಅಪಘಾತಕ್ಕೆ ನಾನೇ ಸಂಪೂರ್ಣ ಹೊಣೆಗಾರ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಅಪಘಾತ ಆಪಾದಿತ ಕಾರ್ ನ ಸಂಪೂರ್ಣ ತಪ್ಪಿನಿಂದ ಆಗಿದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಒಬ್ಬ ಸಂತೋಷ ದಿನೇಶ ಹುರಳಿಕುಪ್ಪಿ ಇತನು ಸದರಿ ಮೊಟಾರ್ ಸೈಕಲ ಹಿಂಬದಿ ಸವಾರ ನಾಗಿದ್ದ. ಆತನು ನನ್ನ ಸಂಬಂಧಿಕ. ಸಂತೋಷನ ಗೆಳೆಯ ದುರ್ಗಪ್ಪ ಪೋಲಸ್ ದೂರನ್ನು ಕೊಟ್ಟ ಎಂದರೆ ನಿಜ. ನಾನು ಈ ಕೇಸಿನಲ್ಲಿ ಕೇಳಿದ ಪರಿಹಾರಕ್ಕೆ ಎದುರುದಾರ ಬಾಧ್ಯಸ್ಥ ಎಂದರೆ ನಿಜ. ನಾನು ಪೋಲಿಸರ ಮೇಲೆ ಅನಗತ್ಯ ಪ್ರಭಾವ ಬೀರಿ ಒಂದು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರ ಪ್ರಕಾರ ಅಪಘಾತದಲ್ಲಿ ನನಗೆ ಕೇವಲ ಸಾದಾ ಗಾಯವಾಗಿದೆ ಎಂದರೆ ಸರಿಯಲ್ಲ. ನಾನು ಮಂಗಳೂರಿನ ಕೆ ಎಸ್ ಹೆಗಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಎಂದರೆ ನಿಜ. ಸದರಿ ಆಸ್ಪತ್ರೆಯ ಗಾಯದ ಪ್ರಮಾಣಪತ್ರವನ್ನು ಹಾಜರು ಮಾಡಿಲ್ಲ.ಸಾಕ್ಷಿಗೆ ಸದರಿ ಆಸ್ಪತ್ರೆಯ ಗಾಯದ ಪ್ರಮಾಣಪತ್ರ ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಒಪ್ಪಿದ್ದು ಗಾಯದ ಪ್ರಮಾಣಪತ್ರವನ್ನು ಸಾಕ್ಷಿ ಒಪ್ಪಿದ್ದರಿಂದ ನಿಆರ್ -1 ಎಂದು ಗುರುತಿಸಲಾಯಿತು. ನಿಆರ್ -1 ರಲ್ಲಿ ಕೇವಲ 2 ಸಾದಾ ಗಾಯ ಅಂತಾ ಕಾಣಿಸಲಾಗಿದೆ ಎಂದರೆ ಸಾಕ್ಷಿ ಅದರಲ್ಲಿ ಆ ರೀತಿ ಕಾಣಿಸಲಾಗಿದೆ ಆದರೆ ನನಗೆ ಗಂಬೀರಸ್ವರೂಪದ ಗಾಯಗಳಾಗಿವೆ. ನಿಆರ್ -1 ರ ಪ್ರಕಾರ ನನಗೆ ಕೇವಲ ಎರಡೇ ಸಾದಾ ಸ್ವರೂಪದ ಗಾಯಗಳು ಆಗಿದ್ದು ನಾನು ಹೇಗಾದರೂ ಮಾಡಿ ಮತ್ತು ದುರುದ್ದೇಶ ಪೂರ್ವಕವಾಗಿ ಹೆಚ್ಚಿನ ಹಣ ಲಪಟಾಯಿಸುವ ದುರುದ್ದೇಶದಿಂದ ನಿಪಿ-5 ಮತ್ತು 9 ರಂತೆ ಒಂದು ಸುಳ್ಳು ಗಾಯದ ಪ್ರಮಾಣಪತ್ರ ಮತ್ತು ಮೆಡಿಕಲ್ ದಾಖಲಾತಿಗಳನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಂಪೂರ್ಣವಾಗಿ ನನ್ನ ತಪ್ಪಿನಿಂದ ಆಗಿದ್ದರಿಂದ ಈ ಪ್ರಕರಣದಲ್ಲಿ ನಾನು ಕೇಳಿದ ಪರಿಹಾರಕ್ಕೆ 2 ನೇ ಎದುರುದಾರ ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್

( ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಎದುರುದಾರರು ಹಾಗೂ ಅವರ ವಕೀಲರನ್ನು ಕರೆಯಲಾಯಿತು, ಗೈರು ಹಾಜರಿ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

2 ನೇ ಎದುರುದಾರರು ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

(ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಗಿದೆ)

(ಎದುರುದಾರರು ಮತ್ತು ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರು, ತಕರಾರು ಸಲ್ಲಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)